# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 234 (265)
2. ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
   (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 22.09.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | 2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶದ 540 ಎಕರೆ ವಿಸ್ತೀರ್ಣದ ಭೂಮಿಯಲ್ಲಿ ಮೆಷಿನ್ ಟೂಲ್ ಪಾರ್ಕ್‌ನ್ನು 425 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಗಿದೆಯೇ; | ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ತುಮಕೂರು ಜಿಲ್ಲೆಯ ವಸಂತ ನರಸಾಪುರ ಕೈಗಾರಿಕಾ ಪ್ರದೇಶದ 540 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಮೆಷಿನ್ ಟೂಲ್ ಪಾರ್ಕನ್ನು ಸ್ಥಾಪಿಸಲು ನಿರ್ಣಯಿಸಲಾಗಿದ್ದು, ಸಿವಿಲ್ ಕಾಮಗಾರಿ ಹಾಗೂ ವಿದ್ಯುತ್ ಕಾಮಗಾರಿಗಳ ಕಾರ್ಯವು ಮುಕ್ತಾಯ ಹಂತದಲ್ಲಿದೆ. |
| ಆ. | ಮೆಷಿನ್ ಟೂಲ್ ಪಾರ್ಕ್ ಸ್ಥಾಪಿತವಾಗಿದ್ದಲ್ಲಿ, ಎಷ್ಟು ಜನ ನಿರುದ್ಯೋಗಿಗಳಿಗೆ ಅವಕಾಶ ಕಲ್ಪಿಸಲಾಗಿದೆ; ಅದರಲ್ಲಿ ರಾಜ್ಯದ | ಮೆಷಿನ್ ಟೂಲ್ ಪಾರ್ಕ್‌ನಲ್ಲಿ ಕೈಗಾರಿಕೆ ಸ್ಥಾಪಿಸಲು ಅನುಮೋದನೆ ಪಡೆದಿರುವ ಘಟಕಗಳಿಗೆ ಜಮೀನು ಹಂಚಿಕೆ ಮಾಡುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಘಟಕಗಳು ತಮ್ಮ ಉತ್ಪಾದನಾ |

| | | |
|---|---|---|
| | ಎಷ್ಟು ಜನ ನಿರುದ್ಯೋಗಿಗಳಿಗೆ ಅವಕಾಶ ಕಲ್ಪಿಸಲಾಗಿದೆ; | ಚಟುವಟಿಕೆಗಳನ್ನು ಪ್ರಾರಂಭಿಸಿದ ನಂತರ, ಉದ್ಯೋಗಗಳನ್ನು ನಿಯಮಾನುಸಾರ ನೀಡಲಾಗುವುದು. |
| ಇ. | ಇದಕ್ಕೆ ಪ್ರಸ್ತುತ ತಗುಲಿರುವ ಒಟ್ಟು ಮೊತ್ತವೆಷ್ಟು; | ಇಲ್ಲಿಯವರೆಗೆ ಭೂಪರಿಹಾರ ಮತ್ತು ಕಾಮಗಾರಿಗಾಗಿ ಒಟ್ಟು ರೂ.385.00 ಕೋಟಿ ವೆಚ್ಚ ಮಾಡಲಾಗಿದೆ. |
| ಈ. | ಈ ಕಾಮಗಾರಿ ಪ್ರಕ್ರಿಯೆ ಟೆಂಡರ್ ನಿಯಮಾನುಸಾರ ನಡೆದಿದೆಯೇ? (ಈ ಬಗ್ಗೆ ಸಂಪೂರ್ಣ ವರದಿ ನೀಡುವುದು) | ಹೌದು.<br>ಕೆ.ಐ.ಎ.ಡಿ.ಬಿ. ಹಾಗೂ ಟಿ.ಎಂ.ಟಿ.ಪಿ. ವತಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರಡಿ ಕಾಮಗಾರಿ ನಿರ್ವಹಿಸಲು ಟೆಂಡರ್ ಪ್ರಕ್ರಿಯೆ ನಡೆಸಿ, ಟೆಂಡರ್‌ನಲ್ಲಿ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಬಿಡ್ಡುದಾರರುಗಳ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗಿದ್ದು, ಅತೀ ಕಡಿಮೆ ದರಗಳನ್ನು ನಮೂದಿಸಿದ ಅರ್ಹ ಬಿಡ್ಡುದಾರರಿಗೆ ಕಾಮಗಾರಿ ನೀಡಲು ಕಾರ್ಯಾದೇಶ ನೀಡಲಾಗಿದೆ. |

ಸಂಖ್ಯೆ: ಸಿಐ 150 ಐಎಪಿ (ಇ) 2020

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು